# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 767 |
| 02. | ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ. ಶರವಣ. ಟಿ.ಎ.<br>(ವಿಧಾನ ಸಭೆಯಿಂದ ಚುನಾಯಿತ ರಾದವರು) |
| 03. | ಉತ್ತರಿಸುವ ದಿನಾಂಕ | : | 13-07-2023 |
| 04. | ಉತ್ತರಿಸುವ ಸಚಿವರು. | : | ಗೃಹ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 10 ವರ್ಷಗಳಲ್ಲಿ ಸಿಐಡಿಯಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಇನ್ನು ಎಷ್ಟು ಪ್ರಕರಣಗಳಿಗೆ ಚಾರ್ಜ್‌ಶೀಟ್ ಸಲ್ಲಿಕೆಯಾಗಬೇಕು; ಅವುಗಳ ಪ್ರಗತಿ ಯಾವ ಹಂತದಲ್ಲಿದೆ; (ವಿವರ ನೀಡುವುದು)</td><td>ಕಳೆದ 10 ವರ್ಷಗಳಲ್ಲಿ ಸಿಐಡಿ ಘಟಕದಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ</th></tr>
<tr><td>2014</td><td>08</td></tr>
<tr><td>2015</td><td>18</td></tr>
<tr><td>2016</td><td>28</td></tr>
<tr><td>2017</td><td>31</td></tr>
<tr><td>2018</td><td>95</td></tr>
<tr><td>2019</td><td>86</td></tr>
<tr><td>2020</td><td>77</td></tr>
<tr><td>2021</td><td>186</td></tr>
<tr><td>2022</td><td>262</td></tr>
<tr><td>2023</td><td>55</td></tr>
</table>
ಎಲ್ಲಾ ಪ್ರಕರಣಗಳು ತನಿಖಾ ಹಂತದಲ್ಲಿರುತ್ತವೆ.<br>
ಕೆಲವು ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿರುವುದರಿಂದ ಅವುಗಳನ್ನು ಹೊರತುಪಡಿಸಿ ಉಳಿದ ಪ್ರಕರಣಗಳು ತನಿಖೆಯಲ್ಲಿರುವುದರಿಂದ ತನಿಖೆಯು ಪೂರ್ಣಗೊಂಡ ನಂತರ ಲಭ್ಯ ಸಾಕ್ಷ್ಯಾಧಾರಗಳ ಆಧಾರದ ಮೇರೆಗೆ ಚಾರ್ಜ್‌ಶೀಟ್/ಬಿ/ಸಿ/ ಇತರೆ ಅಂತಿಮ ವರದಿಗಳನ್ನು ಸಂಬಂಧಪಟ್ಟ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು.</td></tr>
</table>

| | | |
|---|---|---|
| ಆ) | ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರಕರಣಗಳು ಬಾಕಿ ಉಳಿಯಲು ಕಾರಣ ಗಳೇನು: (ವಿವರ ನೀಡುವುದು) | <u>ಪ್ರಕರಣಗಳು ಬಾಕಿ ಉಳಿಯಲು ಕಾರಣಗಳು</u><br>➢ ಪ್ರಕರಣಗಳಲ್ಲಿ ಆಳವಾದ ಮತ್ತು ನಿಖರವಾದ ತನಿಖೆ ನಡೆಸಬೇಕಾಗಿದ್ದು ದಾಖಲಾತಿಗಳ ಸಂಗ್ರಹ, ಆಡಿಟ್ ಮತ್ತು ಆರೋಪಿಗಳು ಹೊರ ರಾಜ್ಯಗಳಲ್ಲಿ ತಲೆಮರೆಸಿಕೊಂಡಿರುವುದು.<br>➢ ಕೆಲವು ಪ್ರಕರಣಗಳಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿರುವುದರಿಂದ ಪ್ರಕರಣಗಳು ತನಿಖೆಯಲ್ಲಿರಲು ಕಾರಣವಾಗಿರುತ್ತದೆ<br>➢ ಬಾಕಿ ಇರುವ ಪ್ರಕರಣಗಳಲ್ಲಿ ಅಪರಾಧಕ್ಕೆ ಸಂಬಂಧಿಸಿದಂತೆ, ವೈದ್ಯಕೀಯ ದಾಖಲೆಗಳು ಮತ್ತು ನ್ಯಾಯಾಧೀಶರ ವಿಚಾರಣಾ ವರದಿಗಳು ಹಾಗೂ ಕೆಲವು ಪ್ರಕರಣಗಳಲ್ಲಿ ಆರೋಪಿಗಳು ಸರ್ಕಾರಿ ನೌಕರರಾಗಿದ್ದು. ಸದರಿ ನೌಕರರ ಸಕ್ಷಮಾ ಪ್ರಾಧಿಕಾರದಿಂದ ಅನುಮೋದನೆ ವಿಳಂಬವಾಗಿರುತ್ತದೆ.<br>➢ 2020-21 ರ ಅವಧಿಯಲ್ಲಿ ಕೋವಿಡ್ ಸಾಂಕ್ರಮಿಕವಾಗಿ ಹರಡಿದ್ದರಿಂದ ತನಿಖೆಯಲ್ಲಿ ಸ್ವಲ್ಪ ಮಟ್ಟಿನ ವಿಳಂಬವಾಗಿರುತ್ತದೆ.<br>ಆದಾಗ್ಯೂ ಈ ಎಲ್ಲಾ ಪ್ರಕರಣಗಳ ತನಿಖೆಯನ್ನು ಶೀಘ್ರವಾಗಿ ಮುಂದುವರೆಸಲಾಗಿರುತ್ತದೆ. |
| ಇ) | ದಾಖಲಾಗಿರುವ ಪ್ರಕರಣಗಳಲ್ಲಿ ಆರ್ಥಿಕ ಪ್ರಕರಣಗಳ ಸಂಖ್ಯೆ ಎಷ್ಟು: ಈ ಪ್ರಕರಣಗಳ ಆಡಿಟ್ ಮಾಡಲು ಅಧಿಕಾರಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಆಡಿಟ್ ಅಧಿಕಾರಿಗಳ ನೇಮಕಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು? | ಒಟ್ಟು 486 ಆರ್ಥಿಕ ಅಪರಾಧ ಪ್ರಕರಣಗಳಾಗಿರುತ್ತವೆ. ಅಗತ್ಯವಿದ್ದ ಪ್ರಕರಣಗಳಲ್ಲಿ ಆಡಿಟ್ ಅಧಿಕಾರಿಗಳನ್ನು ನೇಮಿಸಿಕೊಳ್ಳಲಾಗಿದೆ. |

**HD 10 SDN 2023**

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು